ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ನನಗೆ ಅರ್ಧ ಗಂಟೆ ಕಾಲದ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ನಾಳೆಯೇ ಹೇಳುತ್ತೇನೆ. ನಾನು ಈಗ ಮಂತ್ರಿಗಳ ಮೇಲೆ ಆಪಾದನೆ ಮಾಡಿಲ್ಲ.

೨೨. ಗುಳೇದ್‌ಗುಡ್ಡ ಪಟ್ಟಣಕ್ಕೆ ಕುಡಿಯಲಿಂವ ನೀರಿನ ಪೂರೈಕೆ ಬಗ್ಗೆ.

ಶ್ರೀ ಎಸ್. ಜಿ. ನಂಜಯ್ಯನಮಠ (ಗುಳೇದಗುಡ್ಡ).—ಗುಳೇದಗುಡ್ಡ ನಗರವು ೪೦,೦೦೦ ಜನಸಂಖ್ಯೆಯಿಂದ ಕೂಡಿದ್ದು ಅಲ್ಲಿ ಕುಡಿಯಲಿಂವ ನೀರು ಪೂರೈಕೆಯಾಗಲಿವ ಮೂಲಪ್ರಭಾ ನದಿ ಬತ್ತಿ ಹೋಗಿರುವುದರಿಂದ ೧೫ ಬೋರ್‌ವೆಲ್ ಕೊಡಿ ಎಂದು ೩ ತಿಂಗಳ ಹಿಂದೆಯೇ ಕೇಳಲಾಗಿತ್ತು. ಸರಕಾರ ಕೇವಲ ಆಶ್ವಾಸನೆಯನ್ನಷ್ಟೇ ನೀಡಿದೆ. ಮುಖ್ಯ ಮಂತ್ರಿಗಳಿಗೂ, ನಗರ ನೀರು ಸರಬರಾಜು ಹಾಗೂ ಒಳಚರಂಡಿ ನಿಗಮದ ಅಧ್ಯಕ್ಷರ ಗಮನಕ್ಕೂ ಈವಿಚಾರ ಈ ಹಿಂದೆಯೇ ತಂದಾಗ ಬೋರ್‌ವೆಲ್‌ಗಳನ್ನು ಹಾಕಂತ್ತೇವೆಂದು ಹೇಳಿದ್ದರೂ ಅದು ಈವರೆಗೂ ಕಾರ್ಯಗತವಾಗಿಲ್ಲ. ಜನತೆಗೆ ಕುಡಿಯಲಿಂವ ನೀರಿಲ್ಲ. ಜನ ಸತ್ಯಾಗ್ರಹಕ್ಕೆ ಸಜ್ಜಾಗುತ್ತಿದ್ದಾರೆ. ಈ ತೀವ್ರವೇ ಬೋರ್‌ವೆಲ್‌ಗಳನ್ನು ಸರಕಾರ ಹಾಕಿಸಿ ಕೊಡುವುದೇ ?

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ, ಇದನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸುತ್ತೇನೆ.

೨೩. ಕೊಡಗು ನಿವಾಸಿಗಳಲ್ಲದವರಿಗೆ ಆಯುಧ ಲೈಸೆನ್ಸ್ ಕೊಡುತ್ತಿರುವ ಬಗ್ಗೆ

ಶ್ರೀಮತಿ ಸುಮಾ ವಸಂತ.—ಕೊಡಗು ಜಿಲ್ಲೆಯಲ್ಲಿ ಈಗಾಗಲೇ ಬಂದೂಕು ಮೊದಲಾದ ಆಯುಧಗಳ ಲೈಸನ್ಸ್ ಹೊಂದಿದವರ ಸಂಖ್ಯೆ ವಿಪರೀತವಾಗಿದೆ. ಇದರಲ್ಲಿ ಕೊಡಗು ಜಿಲ್ಲೆಯ ನಿವಾಸಿಗಳಲ್ಲದವರಿಗೂ ಸಹ ಲೈಸನ್ಸ್ ದೊರಕಿದ್ದು ಜಿಲ್ಲೆಯ ಜನರಲ್ಲಿ ಅಶಾಂತಿ ಉಂಟಾಗುವಲ್ಲಿ ಕಾರಣವಾಗಿದೆ. ಅಪರಾಧವೆಸಗಿದ ಕೂಡಲೇ ಹೊರ ರಾಜ್ಯಕ್ಕೆ ಪರಾರಿಯಾಗಿ ತಪ್ಪಿಸಿಕೊಂಡು ಹೋದ ಉದಾಹರಣೆಗಳು ಬಹಳ. ಆದ್ದರಿಂದ, ಜಿಲ್ಲೆಯ ಜನ ಭಯ ಭೀತರಾಗಿದ್ದಾರೆ. ಲೈಸನ್ಸ್ ಕೊಡುವ ಪೂರ್ವದಲ್ಲಿ ಇಂಡಿಯನ್ ಆರ್ಮ್ಸ್ ಆಕ್ಟ್ ಪ್ರಕಾರ ವಹಿಸಬೇಕಾದ ಎಚ್ಚರಿಕೆಯನ್ನು ಜಿಲ್ಲೆಯ ಪೋಲೀಸಿನವರು ಹಾಗೂ ರೆವಿನ್ಯೂ ಅಧಿಕಾರಿಗಳು ವಹಿಸುತ್ತಿಲ್ಲ. ಆದ್ದರಿಂದ ಈ ತನಕ ಲೈಸನ್ಸ್ ಪಡೆದವರನ್ನು ಇನ್ನೊಮ್ಮೆ ಸಮಗ್ರ ತನಿಖೆಗೆ ಒಳಪಡಿಸುವುದಲ್ಲದೆ ಇನ್ನು ಮುಂದೆ ಲೈಸನ್ಸ್ ಕೊಡುವಾಗ ಅವರ ಪೂರ್ವ ಚರಿತ್ರೆ ಬಗ್ಗೆ ವಿಚಾರಿಸಿ ಲೈಸನ್ಸ್ ನೀಡುವತ್ತ ಸರಕಾರದ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಅಧ್ಯಕ್ಷರೆ, ಆಕ್ಟ್ ಪ್ರಕಾರವೇ ಲೈಸೆನ್ಸ್ ಕೊಟ್ಟಿದ್ದೇವೆ. ಈಗ ಮತ್ತೆ ತಪಾಸಣೆ ಮಾಡಬೇಕೆಂದರೆ, ಕೇರಳಾ ಮತ್ತು ಕೊಡಗಿನವರು ಎಂದು ತಾರತಮ್ಯ ಮಾಡುತ್ತಿದ್ದಾರೆಂದು ಅಲ್ಲಿನ ಕೇರಳಾ ಮುಖ್ಯಮಂತ್ರಿಗಳಿಗೆ. ಅಲ್ಲಿನ ಗೃಹ ಸಚಿವರಿಗೆ ದೂರು ಕೊಡುತ್ತಾರೆ. ಆದ್ದರಿಂದ ನಾವು ಇಲ್ಲಿನ ಜನರಿಗೆ ಯಾವರೀತಿಯಲ್ಲಿ ಲೈಸೆನ್ಸ್‌ಗಳನ್ನು ಕೊಡುತ್ತಿದ್ದೇವೆ, ಅದೇ ರೀತಿ ಅವರ ಚಾರಿತ್ರ್ಯ ಚೆನ್ನಾಗಿದ್ದರೆ ಲೈಸನ್ಸ್ ಕೊಡಬೇಕಾಗುತ್ತದೆ. ಅದರ ಬಗ್ಗೆ ಎಚ್ಚರಿಕೆ ವಹಿಸಿದ್ದಾರೆ. ಶಾಂತಿ ಪಾಲನೆ ಮಾಡುವವರಿಗೆ ಮತ್ತು ನೆಮ್ಮದಿಯಿಂದ ಜೀವನ ಮಾಡತಕ್ಕವರಿಗೆ, ಅವರು ಕೇರಳದವರು ಇರಲಿ ಅಥವಾ ಯಾರೇ ಇರಲಿ ಅವರೆಲ್ಲರಿಗೂ ರಕ್ಷಣೆ ಕೊಡತಕ್ಕದ್ದು ನಮ್ಮ ಕರ್ತವ್ಯ. ಹೊರಗಡೆಯಿಂದ ಬಂದು ನೆಲೆಸಿರತಕ್ಕವರಿಗೆ ತಾರತಮ್ಯ ಮಾಡಲಿಕ್ಕೆ ಆಗುವುದಿಲ್ಲ. ಯಾರು ಕಾನೂನು ಬದ್ಧವಾಗಿ ಜೀವನ ಸಾಗಿಸುತ್ತಿದ್ದಾರೆ ಅವರಿಗೆ ರಕ್ಷಣೆ ಕೊಡುತ್ತೇವೆ. ಯಾರು ಕಾನೂನು ವಿರುದ್ಧವಾಗಿ ಅಪರಾಧ ಎಸಗುತ್ತಾರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದು ಕೊಳ್ಳುವುದಕ್ಕೆ ಈಗಾಗಲೇ ಹೇಳಿದ್ದೇವೆ.

ಶ್ರೀ ಕೆ. ಬಿ. ಕೋಳಿವಾಡ.—ಅಧ್ಯಕ್ಷರೆ, ಒಂದು ನಿಮಿಷದಲ್ಲಿ ಹೇಳುತ್ತೇನೆ.

ಅಧ್ಯಕ್ಷರು.—ಈಗ ಆಗುವುದಿಲ್ಲ ಅಬ್ಸೆಂಟ್ ಎಂದು ಬರೆದುಕೊಂಡಿದ್ದೇನೆ.